# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 869 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| 3) | ಉತ್ತರಿಸಬೇಕಾದ ದಿನಾಂಕ | 16/12/2024 |
| 4) | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಒಟ್ಟು ಐಟಿಐಗಳ ಸಂಖ್ಯೆಯೆಷ್ಟು; ಅವುಗಳಲ್ಲಿ ಸರಕಾರಿ ಖಾಸಗಿ ಮತ್ತು ಅನುದಾನಿತ ಐಟಿಐಗಳು ಎಷ್ಟು; ಒಟ್ಟು ಬೋಧಕರುಗಳ ಸಂಖ್ಯೆಯೆಷ್ಟು; | ಸರ್ಕಾರಿ ಐಟಿಐಗಳು – 270<br>ಖಾಸಗಿ ಐಟಿಐಗಳು – 1035<br>ಖಾಸಗಿ ಅನುದಾನಿತ ಐಟಿಐಗಳು – 192<br>ರಾಜ್ಯದಲ್ಲಿರುವ ಒಟ್ಟು ಐಟಿಐಗಳ ಸಂಖ್ಯೆ – 1497<br>**ಒಟ್ಟು ಬೋಧಕರ ಸಂಖ್ಯೆ – 7173** |
| ಆ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಸರಕಾರಿ ಖಾಸಗಿ ಮತ್ತು ಅನುದಾನಿತ ಐಟಿಐಗಳು ಎಷ್ಟು; ಅನುದಾನಿತ ಐಟಿಐಗಳಲ್ಲಿ ಈಗ ಇರುವ ಅನುದಾನಕ್ಕೆ ಒಳಪಟ್ಟಿರುವ ಬೋಧಕರ ಸಂಖ್ಯೆಯೆಷ್ಟು; ಪ್ರಸ್ತುತ ಅನುದಾನಿತ ಐಟಿಐಗಳಲ್ಲಿ ಬೋಧಕರು ನಿವೃತ್ತಿಯಾದ ಬಳಿಕ ಸದರಿ ಹುದ್ದೆಗಳಿಗೆ ಸರಕಾರ ಅನುದಾನ ನೀಡಲು ಕ್ರಮವಹಿಸಲಾಗುತ್ತಿದೆಯೇ; ಇಲ್ಲದಿದ್ದರೆ ಯಾವಾಗ ಅನುದಾನ ನೀಡಲು ಕ್ರಮವಹಿಸಲಾಗುತ್ತಿದೆ; | **ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿರುವ ಐಟಿಐಗಳು**<br>ಸರ್ಕಾರಿ ಐಟಿಐಗಳು – 06<br>ಖಾಸಗಿ ಐಟಿಐಗಳು – 08<br>ಖಾಸಗಿ ಅನುದಾನಿತ ಐಟಿಐಗಳು – 13<br>**ಉಡುಪಿ ಜಿಲ್ಲೆಗಳಲ್ಲಿರುವ ಐಟಿಐಗಳು**<br>ಸರ್ಕಾರಿ ಐಟಿಐಗಳು – 07<br>ಖಾಸಗಿ ಐಟಿಐಗಳು – 01<br>ಖಾಸಗಿ ಅನುದಾನಿತ ಐಟಿಐಗಳು – 04<br>**ಒಟ್ಟು ಸಂಖ್ಯೆ : 39**<br>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಅನುದಾನಿತ ಐಟಿಐಗಳಲ್ಲಿ ಅನುದಾನಕ್ಕೆ ಒಳಪಟ್ಟಿರುವ ಬೋಧಕರ ಒಟ್ಟು ಸಂಖ್ಯೆ: **161**<br>ಪ್ರಸ್ತುತ ಅನುದಾನಿತ ಐಟಿಐಗಳಲ್ಲಿ ಬೋಧಕರಾಗಿ ಕಾರ್ಯನಿರ್ವಹಿಸುತ್ತಿರುವ ಅನುದಾನಿತ ಕಿರಿಯ ತರಬೇತಿ ಅಧಿಕಾರಿಗಳು ನಿವೃತ್ತಿಯಾದ ಬಳಿಕ ಸಂಸ್ಥೆಯವರು ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಿದ್ದಲ್ಲಿ, ನಿಯಮಾನುಸಾರ ಪರಿಶೀಲಿಸಿ ವೇತನಾನುದಾನ ನೀಡುವ ಬಗ್ಗೆ ಕ್ರಮವಹಿಸಲಾಗುತ್ತಿದೆ. |
| ಇ) | ಪ್ರಸ್ತುತ ಕೈಗಾರಿಕೆಗಳಿಗೆ ಹೆಚ್ಚು ಸಂಖ್ಯೆಯ ಐಟಿಐ ಶಿಕ್ಷಣ ಹೊಂದಿರುವವರ ಅಗತ್ಯವಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿರುವ ಎಲ್ಲಾ ಐಟಿಐಗಳ ಉನ್ನತೀಕರಣ ಮತ್ತು ಅಭಿವೃದ್ಧಿಗೆ ಯಾವ ಕ್ರಮಗಳನ್ನು ಜರುಗಿಸಲಾಗುತ್ತಿದೆ? (ವಿವರ ನೀಡುವುದು) | ಅ) ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ, ರಾಜ್ಯದಲ್ಲಿ 50 ವರ್ಷಗಳನ್ನು ಪೂರೈಸಿರುವ ಪಾರಂಪರಿಕ ಸಂಸ್ಥೆಗಳ ಪೈಕಿ 6 ಸಂಸ್ಥೆಗಳನ್ನು ರೂ.100.00 ಕೋಟಿಗಳ ಅನುದಾನದಲ್ಲಿ ಆಧುನಿಕ ತಂತ್ರಜ್ಞಾನದ ಪಠ್ಯಕ್ರಮದಂತೆ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳುವ ಮೂಲಕ ಹಾಗೂ ಯಂತ್ರೋಪಕರಣ, ಉಪಕರಣಗಳು, ಪೀಠೋಪಕರಣಗಳನ್ನು ಒದಗಿಸುವ ಮೂಲಕ ಉನ್ನತೀಕರಿಸಲಾಗುತ್ತಿದೆ. |

| | | |
|---|---|---|
| | | ಆ) ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮದಿಂದ (KMERC) ಗಣಿಬಾಧಿತ ಜಿಲ್ಲೆಗಳಲ್ಲಿ CEPMIZ (Comprehensive Environment Plan for Mining Impact Zone) ಯೋಜನೆಯನ್ನು ಜಾರಿಗೊಳಿಸಿದ್ದು, ಇದರ ಅಡಿಯಲ್ಲಿ ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಬರುವ 07 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ರೂ.7018.94 ಲಕ್ಷಗಳ ಅನುದಾನದಲ್ಲಿ ಸ್ವಂತ ಕಟ್ಟಡಗಳ ನಿರ್ಮಾಣವು ಸೇರಿದಂತೆ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳುವುದು ಹಾಗೂ ಆಧುನಿಕ ತಂತ್ರಜ್ಞಾನದ ಪಠ್ಯಕ್ರಮದಂತೆ ಯಂತ್ರೋಪಕರಣ, ಪೀಠೋಪಕರಣಗಳನ್ನು ಒದಗಿಸುವ ಮೂಲಕ ಇಲಾಖೆಯಿಂದ ಉನ್ನತೀಕರಿಸಲಾಗುತ್ತಿದೆ.<br><br>ಇ) ಕೈಗಾರಿಕೆಗಳು ಮತ್ತು ಐ.ಟಿ.ಐ.ಗಳ ನಡುವಿನ ಸ್ಕಿಲ್ ಗ್ಯಾಪ್ ಅನ್ನು ಹೊಂದಿಸಿಕೊಳ್ಳಲು ಮತ್ತು ಭವಿಷ್ಯದ ಬೇಡಿಕೆಗಳನುಸಾರ ಯುವ ಪೀಳಿಗೆಯ ಕೌಶಲ್ಯ ಅಭಿವೃದ್ಧಿಯನ್ನು ಹೆಚ್ಚಿಸುವ ಸಲುವಾಗಿ ಆಧುನಿಕ ಯಂತ್ರೋಪಕರಣಗಳನ್ನು ಬಳಸುವ ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವುದು ಅವಶ್ಯಕವಾಗಿರುತ್ತದೆ. ಈ ನಿಟ್ಟಿನಲ್ಲಿ 2021 ನೇ ಸಾಲಿನಲ್ಲಿ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯು ಟಾಟಾ ಟೆಕ್ನಾಲಜೀಸ್ ಲಿಮಿಟೆಡ್ ರವರ ಸಹಭಾಗಿತ್ವದಲ್ಲಿ 150 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು "ಉದ್ಯೋಗ" ಯೋಜನೆಯಡಿ ಉನ್ನತೀಕರಿಸಲಾಗಿದೆ.<br><br>ಈ) ಕೇಂದ್ರ ಪುರಸ್ಕೃತ ಯೋಜನ STRIVE ಕಾರ್ಯಕ್ರಮದ ಅಡಿಯಲ್ಲಿ 21 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಹಾಗೂ 01 ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಉನ್ನತೀಕರಿಸಲಾಗಿದೆ. |

**ಸಂಖ್ಯೆ: ಕೌಉಜೀಇ 48 ಕೈತಪ್ರ 2024**

**(ಡಾ. ಶರಣಪ್ರಕಾಶ ಆರ್ ಪಾಟೀಲ್)**
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.